

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

# ಶ್ರೀ ಸುಬ್ರಹ್ಮಣ್ಯ ಸಭಾ-ಮಂಗಳೂರು ''ನೂರು ಹೆಜ್ಜೆ'' ವೈಭವ

(...1ನೇ ಪುಟದಿಂದ)

(ಶಿಕ್ಷಣ), ಶ್ರೀಮತಿ ಗೀತಾ (ಶಿಕ್ಷಣ), ಶ್ರೀಮತಿ ವಾಣಿ ಜೆ. ಶರ್ಮ (ಬ್ಯಾಂಕಿಂಗ್), ಶ್ರೀ ಇನ್ನಾ ರಾಮಮೋಹನರಾವ್ (ಆದರ್ಶ ವ್ಯಕ್ತಿತ್ವ), ಶ್ರೀ ಇನ್ನಾ ಜಗದೀಶರಾವ್ (ಬ್ಯಾಂಕಿಂಗ್), ಶ್ರೀ ನೀಲಾವರ ಲಕ್ಷ್ಮೀನಾರಾಯಣಯ್ಯ (ಯಕ್ಷಗಾನ), ಶ್ರೀ ಸಂದೀಪ್ ಶಾಸ್ತ್ರಿ (ಶಿಕ್ಷಣ)

ಕಟ್ಟಡ ನಿರ್ಮಾಣದ ರೂವಾರಿಗಳಾದ ಶ್ರೀ ದಿವಾಕರ, ಶ್ರೀ ನಿಳೀತ್, ಶ್ರೀ ಕುಮಾರ ಇವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮ ನಿರ್ವಹಣೆ ಶ್ರೀಮತಿ ಕವಿತಾ ಶಾಸ್ತ್ರಿ ಹಾಗೂ ಶ್ರೀ ನಾಗರಾಜ ವರ್ಕಾಡಿ ಇವರಿಂದ ನಡೆಯಿತು.

ಧನ್ಯವಾದವನ್ನು ಡಾ.ಎ.ಪಿ. ಕೃಷ್ಣ ಅರ್ಪಿಸಿದರು. ಸಾಂಸ್ಕೃತಿ ಕಾರ್ಯಕ್ರಮದ ಅಂಗವಾಗಿ ಅಂತರಾಷ್ಟ್ರೀಯ ಖ್ಯಾತಿಯ, ನಾಟ್ಯ ವಿಶಾರದ, ಗುರುಕುಲಭೂಷಣ ವಿದ್ವಾನ್ ಯು. ಕೆ. ಪ್ರವೀಣ್ ಇವರ ನೃತ್ಯ ವಿದ್ಯಾಲಯ ಕದ್ರಿ ಇದರ ಶಿಷ್ಯ ವೃಂದದವರಿಂದ ಭಸ್ಮಾಸುರ ಮೋಹಿನಿ ನೃತ್ಯರೂಪಕ ಹಾಗೂ ಭರತನಾಟ್ಯ ಪ್ರದರ್ಶನ ಜರಗಿತು. ವೈವಿಧ್ಯಮಯ ಖಾದ್ಯಗಳ ಭರ್ಜರಿ ಭೋಜನ ಅಂದಿನ ವಿಶೇಷವಾಗಿತ್ತು.

18–05–2008

ಸ್ಥಾನಿಕ ಬ್ರಾಹ್ಮಣ ಸಮಾಜದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಬೇರೆ ಬೇರೆ ಊರುಗಳಲ್ಲಿ ನೆಲೆಯನ್ನು ಗಳಿಸಿದ ನಮ್ಮ ಸಮಾಜದ ವಿವಿಧ ಸಂಘಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವದ ಅಂಗವಾಗಿ ತಾ.18–05–2008ರಂದು ಆಯೋಜಿತವಾಗಿತ್ತು. ಬೆಳಿಗ್ಗೆ 9–30 ಗಂಟೆಗೆ ಶಿವಬ್ರಾಹ್ಮಣ ಸಭಾ, ಕಾಸರಗೋಡು ಇವರಿಂದ ವೈವಿಧ್ಯಮಯವಾದ ಕಾರ್ಯಕ್ರಮಗಳು ಮೂಡಿ ಬಂದವು. ಗಾನ, ವಿಡಂಬನೆ, ಹಾಸ್ಯ ಮಿಳಿತ ಕಾರ್ಯಕ್ರಮಗಳು ಸಭಿಕರನ್ನು ರಂಜಿಸಿದವು. ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ, ಮೈಸೂರು ಇವರಿಂದ ಕಾರ್ಯಕ್ರಮಗಳು ಆ ಬಳಿಕ ಪ್ರಸ್ತುತಗೊಂಡವು. ಮಿತ್ರ ಸಮಾಜ, ಪುತ್ತೂರು ಇದನ್ನು ಶ್ರೀಮತಿ ಶೋಭಿತಾ ಸತೀಶ್ ಪ್ರತಿನಿಧಿಸಿ ಸುಗಮ ಸಂಗೀತವನ್ನು ಪ್ರಸ್ತುತಪಡಿಸಿದರು. ಇವರಿಗೆ ಹಿಮ್ಮೇಳದಲ್ಲಿ ನಮ್ಮವರೇ ಆದ ಶ್ರೀ ಸಾಯಿನಾರಾಯಣ್, ಕಲ್ಮಡ್ಕ ಹಾಗೂ ಡಾ. ದಿನೇಶ್, ಸುಳ್ಯ ಇವರು ಸಹಕರಿಸಿದರು. ಭಾವಗೀತೆ, ಜಾನಪದ ಗೀತೆಗಳಿಂದ ಕೂಡಿದ ಈ ಕಾರ್ಯಕ್ರಮ ಬಹು ರಂಜನೀಯವಾಗಿ ಮೂಡಿಬಂದಿತು.

ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿ ಇದರ ಸದಸ್ಯರಿಂದ ನೃತ್ಯ, ಗೀತೆಗಳ ಸಾಂಸ್ಕೃತಿಕ ರಸದೂಟ ಸಭಿಕರಿಗೆ ಮುದನೀಡಿತು. ಶ್ರೀಮತಿ ಉಷಾ ಪ್ರವೀಣ್ ಭಕ್ತಿಗೀತೆಯ ಮೂಲಕ ಕಲಾರಸಿಕರ ಮನಸೂರೆಗೈದರು.

ಸ್ಥಾನಿಕ ಬ್ರಾಹ್ಮಣ ಸಭಾ, ಕುಂದಾಪುರ ಇದರ ಸದಸ್ಯರಿಂದ ವಿವಿಧ ಮನರಂಜನೆಯ ಕಾರ್ಯಕ್ರಮಗಳು ನೆರೆದವರನ್ನು ರಂಜಿಸಿದವು. ಬಾಲಪ್ರತಿಭೆ ಕು. ತನ್ವಿರಾವ್ ಚಲನಚಿತ್ರ ಗೀತೆಗೆ ಸೊಗಸಾಗಿ ನರ್ತಿಸಿ ಸಭಿಕರ ಮೆಚ್ಚುಗೆಗೆ ಪಾತ್ರಳಾದಳು.

ಭೋಜನ ವಿರಾಮದ ಬಳಿಕ ಶ್ರೀ ರಾಮಕೃಷ್ಣ ಕಾಟುಕುಕ್ಕೆ ತಮ್ಮ ಅಮೋಘವಾದ ಕಂಠ ಸಿರಿಯಿಂದ ಭಕ್ತಿಗಾನ ಸುಧೆಯನ್ನು ಹರಿಸಿದರು. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಉಡುಪಿ ಇದರ ಪ್ರತಿನಿಧಿಯಾಗಿ ಕು. ಚೈತ್ರಾ ಭರತನಾಟ್ಯ ಪ್ರದರ್ಶನ ನೀಡಿದರು.

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ (ರಿ.), ಮೈಸೂರು ಇದರ ಸದಸ್ಯರಿಂದ ಗೀತೆ, ನೃತ್ಯಗಳೊಂದಿಗೆ ಕಾರ್ಯಕ್ರಮ ಮುಂದುವರಿಯಿತು. ಸದಸ್ಯರು ಧರಿಸಿದ ಸಮವಸ್ತ್ರ, ಶಿಸ್ತುಬದ್ಧವಾಗಿ ನೀಡಿದ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಂಘ, ಬೆಳ್ತಂಗಡಿ ಇವರಿಂದ ಹಾಸ್ಯ ಮಿಶ್ರಿತ ವಿವಿಧ ಮನರಂಜನೆಯ ಕಾರ್ಯಕ್ರಮಗಳು ಮುದ ನೀಡಿದವು. ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಸುಳ್ಯ ಇದರ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬಂದವು.

ಶ್ರೀ ಪ್ರಶಾಂತರಾವ್ ಇವರಿಂದ ಭರತನಾಟ್ಯ ಪ್ರದರ್ಶನವು ನೀಡಲ್ಪಟ್ಟಿತು.

ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವದ ಸಮಾರೋಪ ಸಮಾರಂಭವು ಶ್ರೀ ಮೋಹನ್‌ರಾವ್, ಮಹಾಪ್ರಬಂಧಕರು, ಕಾರ್ಪೊರೇಶನ್ ಬ್ಯಾಂಕ್, ಶ್ರೀ ಉಮೇಶ್‌ರಾವ್, ಎರ್ಮಾಳು, ಶ್ರೀ ಶರತ್‌ಕುಮಾರ್ ಬಿ. ಇವರುಗಳ ಉಪಸ್ಥಿತಿಯಲ್ಲಿ ಶ್ರೀ ಎಂ. ಅರ್. ವಾಸುದೇವ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀಮತಿ ಕ್ಷಮಾ ಹಾಗೂ ಕು. ಶ್ರೀರಕ್ಷಾ ಇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಡಾ.ಎ.ಪಿ. ಕೃಷ್ಣ ಸ್ವಾಗತ ಭಾಷಣವನ್ನು ಮಾಡಿದರು.

ಶ್ರೀ ಮೋಹನ್‌ರಾವ್ ಮಾತನಾಡಿ "ಶ್ರೀ ಸುಬ್ರಹ್ಮಣ್ಯ ಸಭೆ ನೂರು ವರ್ಷಗಳ ಇತಿಹಾಸ ಉಳ್ಳ ಸಂಸ್ಥೆ. ಈ ಸಂಸ್ಥೆಗೆ ಶುಭಾಶಯಗಳು. ಮನುಷ್ಯನಿಗೆ ಹೇಗೆ ಆರೋಗ್ಯ ಮುಖ್ಯವೋ ಹಾಗೇ ಸಂಸ್ಥೆಗಳಿಗೆ ಬೆಳವಣಿಗೆ ಮುಖ್ಯ. ಅನ್ನದಾನಕ್ಕಿಂತಲೂ ವಿದ್ಯಾದಾನ ಶ್ರೇಷ್ಠ. ಅಂತಹ ವಿದ್ಯಾದಾನಕ್ಕೆ ಬಹಳ ಪ್ರಾಮುಖ್ಯತೆಯನ್ನು ಶ್ರೀ ಸುಬ್ರಹ್ಮಣ್ಯ ಸಭೆ ನೀಡುತ್ತಿದೆ. ರೂ.6ಲಕ್ಷಕ್ಕಿಂತಲೂ ಅಧಿಕ ಮೊತ್ತವನ್ನು ವಿದ್ಯಾರ್ಥಿ ವೇತನದ ರೂಪವಾಗಿ ನೀಡುವ ಈ ಸಂಸ್ಥೆ ಸಮಾಜದ ಬೆಳವಣಿಗೆಯಲ್ಲೂ ಮಹತ್ತರ ಪಾತ್ರವನ್ನು ಪಡೆದಿದೆ. ಹೀಗೆಯೇ ಈ ಸಂಸ್ಥೆ ಇನ್ನೂ ಬೆಳೆಯಲಿ" ಎಂದು ಹಾರೈಸಿದರು.

ಶ್ರೀ ಉಮೇಶ್‌ರಾವ್ ಎರ್ಮಾಳು "ಪ್ರತಿಯೊಬ್ಬರಲ್ಲಿಯೂ ಪ್ರತಿಭೆ ಇದೆ. ಆ ಪ್ರತಿಭೆಯನ್ನು ಗುರುತಿಸಿ ಬೆಳೆಸಬೇಕು. ಹಾಗೆಯೇ ಪ್ರತಿಯೊಬ್ಬನೂ ನಗುನಗುತ್ತಾ ಬಾಳಬೇಕು. "ನಗುವು ಸಹಜಧರ್ಮ, ನಗಿಸುವುದು ಪರಧರ್ಮ" ತಾನು ಮಾತ್ರ ನಗುತ್ತಾ ಇದ್ದರೆ ಸಾಲದು. ಉಳಿದವರನ್ನೂ ನಗಿಸಬೇಕು. ನೀನು ನಕ್ಕರೆ ಎಲ್ಲರೂ ನಗುತ್ತಾರೆ. ನೀನು ಅತ್ತರೆ ನೀನೊಬ್ಬ ಮಾತ್ರ ಅಳಬೇಕಾಗುತ್ತದೆ. ನಮ್ಮ ಸಾಮಾಜಿಕ ಜೀವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾಮುಖ್ಯವನ್ನು ಪಡೆಯುತ್ತವೆ.



ಹಾಗಾಗಿ ಆದಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಬೇಕು. ಅದೇ ರೀತಿ ನಮ್ಮ ಏಳಿಗೆಗೆ ಮುಖ್ಯವಾಗಿ ಬೇಕಾಗುವುದು ನಮ್ಮ ಬ್ರಾಹ್ಮಣ್ಯದ ರಕ್ಷಣೆ. ಗಾಯತ್ರಿ ಮಂತ್ರದ ಮೂಲಕ ಇದನ್ನು ಸಾಧಿಸಬಹುದು" ಎಂದರು.

ಶ್ರೀ ಶರತ್ ಕುಮಾರ್ ತಮ್ಮ ಅನಿಸಿಕೆಗಳನ್ನು ಈ ರೀತಿ ವಿವರಿಸಿದರು. "ನಾನು ನನ್ನದು ಎಂಬ ಸಂಕುಚಿತ ಭಾವನೆಗಳಿಂದ ಹೊರಬಂದು ನಾವು ನಮ್ಮದು ಎಂಬ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳೋಣ. ವಿದ್ಯೆಯ ಪ್ರಸಾರಕ್ಕಾಗಿ ಏನೆಲ್ಲವನ್ನು ಮಾಡಬಹುದೋ ಅದನ್ನೆಲ್ಲ ಮಾಡೋಣ".

ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಎಂ.ಆರ್. ವಾಸುದೇವ "ಶ್ರೀ ಮೋಹನ ರಾವ್ ವಿನಯದ ಪ್ರತೀಕ, ಶ್ರೀ ಉಮೇಶರಾವ್ ಶ್ರೇಷ್ಠ ಸಂಘಟಕ ಶ್ರೀ ಶರತ್ ಕುಮಾರ್, ಯುವ ನೇತಾರ. ಶತಮಾನೋತ್ಸವದ ಕಾರ್ಯಕ್ರಮಗಳು ಎಲ್ಲರ ಸಹಕಾರದಿಂದಾಗಿ ಚೆನ್ನಾಗಿ ನಡೆದಿದೆ. ಎಲ್ಲಾ ಸಮಾಜ ಬಾಂಧವರನ್ನೂ ಈ ಬಗ್ಗೆ ಅಭಿನಂಧಿಸುತ್ತೇನೆ" ಎಂದರು. "ನಿಮ್ಮ ಬಾಳನ್ನು ನೀವೇ ಬಾಳಿರಿ, ನಿಮ್ಮನ್ನು ನೀವೇ ಆಳಿರಿ, ಅಮರರಾಗಿ ಉಳಿಯಿರಿ" ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ದಿ. ಎನ್.ಕೆ. ಗೋಪಾಲಕೃಷ್ಣರಾವ್ ಇವರ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು ಸೇರಿ ರೂ.ಒಂದುಲಕ್ಷ ಮೀರಿದ ದೇಣಿಗೆಯನ್ನು ನೀಡಿದುದಕ್ಕಾಗಿ ಹಿರಿಯ ಪುತ್ರ ಶ್ರೀ ಎಂ.ಕೆ. ಮೋಹನ್‌ರಾವ್ ಇವರನ್ನು ಸನ್ಮಾನಿಸಲಾಯಿತು.

ಅಪೂರ್ವ ಸಾಧನೆಗಾಗಿ ನಮ್ಮ ಸಮಾಜದ ಅನೇಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

1) ಶ್ರೀ ಭವಾನಿ ಶಂಕರರಾವ್ – ಕಾನೂನು
2) ಶ್ರೀ ಯು. ಸುದರ್ಶನರಾವ್ – ಸ್ವಾತಂತ್ರ್ಯ ಸಂಗ್ರಾಮ
3) ಶ್ರೀ ಗಣೇಶ್ ಪಡುಬಿದ್ರಿ – ಕ್ರೀಡೆ ಹಾಗೂ ಸಾಹಸ
4) ಶ್ರೀ ವೇಣುಗೋಪಾಲ ಶ್ಯಾನುಭೋಗ್ – ಸಂಗೀತ
5) ಶ್ರೀ ಬಿಳಿನೆಲೆ ಗೋಪಾಲರಾವ್ – ಧಾರ್ಮಿಕ
6) ಶ್ರೀಮತಿ ಸುಧಾಮೂರ್ತಿ ಚಳ್ಳಕೆರೆ – ಭರತನಾಟ್ಯ
7) ಡಾ. ವಿಠಲರಾವ್ – ವೈದ್ಯಕೀಯ
8) ಶ್ರೀ ರಾಜೇಂದ್ರ ಕೇದಿಗೆ – ಕಲೆ
9) ಶ್ರೀ ಕಿಶನ್ ಪ್ರಸಾದ್ – ಆರಕ್ಷಕ ಸೇವೆ
10) ಶ್ರೀ ಆತ್ಮಾರಾಮ ಶಾಸ್ತ್ರಿ – ಪೌರೋಹಿತ್ಯ
11) ಶ್ರೀ ಡಾ. ಎನ್. ವಿ. ಉಪಾಧ್ಯಾಯ – ಶತಾಯುಷಿ
12) ಶ್ರೀ ನಂದಳಿಕೆ ಬಾಲಚಂದ್ರರಾವ್ – ಸಾಹಿತ್ಯ
13) ಶ್ರೀ ರಮೇಶ್‌ರಾವ್ ಶ್ಯಾನುಭೋಗ್ – ಹೋಟೆಲ್ ಉದ್ಯಮ
14) ಶ್ರೀ ಕೆ. ಸಚ್ಚಿದಾನಂದಯ್ಯ – ಶಿಕ್ಷಣ ಕ್ಷೇತ್ರ
15) ಶ್ರೀ ಡಾ. ದಯಾನಂದರಾವ್ – ಆದರ್ಶವ್ಯಕ್ತಿತ್ವ
16) ಶ್ರೀಮತಿ ಶಾರದಾ ಟೀಚರ್ – ಶಿಕ್ಷಣ

ಕಾರ್ಯಕ್ರಮವು ಶ್ರೀ ಕರುಣರಾವ್ ಬೆಳ್ಳೆ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಸಭಾ ಕಾರ್ಯಕ್ರಮದ ಬಳಿಕ ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ಇದರ ಸದಸ್ಯರಿಂದ ಭಾರತದೇಶದ ವಿಭಿನ್ನ ರಾಜ್ಯಗಳ ಸಾಂಸ್ಕೃತಿಕ ಪರಿಚಯವನ್ನು ಪ್ರಸ್ತುತಪಡಿಸಲಾಯಿತು. ಕಾಶ್ಮೀರ, ಪಂಜಾಬ್, ನಾಗಲ್ಯಾಂಡ್, ಕೇರಳ, ತಮಿಳುನಾಡು, ಗೋವಾ, ಕರ್ನಾಟಕ ಹೀಗೆ ಪ್ರತಿ ರಾಜ್ಯದ ವಿಶೇಷ ನೃತ್ಯಗಳ ಸಂಯೋಜನೆಯನ್ನು ಎಲ್ಲಾ ಸಮಾಜ ಬಾಂಧವರು ಮುಕ್ತಕಂಠದಿಂದ ಶ್ಲಾಘಿಸಿದರು. ಭಾರತ ವೈಭವದ ನಿರೂಪಣೆಯನ್ನು ಶ್ರೀಮತಿ ಜಯಂತಿ ವಿನೋದ್‌ರಾವ್, ಶ್ರೀಮತಿ ಮಂಜುಳಾ ಮುರಲೀಧರರಾವ್ ನಿರ್ವಹಿಸಿದರು.

ಎಲ್ಲಾ ಕಾರ್ಯಕ್ರಮಗಳ ನಿರೂಪಕರಾಗಿ ಶ್ರೀ ಪಲಿಮಾರು ಸಂಜಯ ಕುಮಾರ್‌ರಾವ್ ಸಹಕರಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯ ಸಂಘಟಕರು – ಶ್ರೀಮತಿ ಜಯಂತಿ ವಿನೋದ್‌ರಾವ್, ಶ್ರೀಮತಿ ಕವಿತಾ ಶಾಸ್ತ್ರಿ, ಶ್ರೀ ಪಲಿಮಾರು ಸಂಜಯಕುಮಾರ್‌ರಾವ್.

ರಾಷ್ಟ್ರಗೀತೆಯೊಂದಿಗೆ ಶತಮಾನೋತ್ಸವ ಸಂಭ್ರಮಕ್ಕೆ ತೆರೆ ಬಿದ್ದಾಗ ಸಮಾಜ ಬಾಂಧವರ ಮನದಲ್ಲಿ ಮಹತ್ಸಾಧನೆಯೊಂದನ್ನು ಮಾಡಿ ಮುಗಿಸಿದ ತೃಪ್ತಿ ಕಾಣಿಸಿಕೊಂಡಿತು.

ಸುಗ್ರಾಸ ಭೋಜನದೊಂದಿಗೆ ಎಲ್ಲರೂ ಸಂತೃಪ್ತರಾಗಿ ಶತಮಾನೋತ್ಸವ ಸಂಭ್ರಮವನ್ನು ನೆನೆಪಿಸಿಕೊಳ್ಳುತ್ತಾ ತಮ್ಮತಮ್ಮ ನಿವಾಸಗಳಿಗೆ ತೆರಳಿದರು.

**ವರದಿ : ಪ. ಸಂಜಯ ಕುಮಾರ್.**